

ಉತ್ತರಿಸಲಾಗದೆ ಹುಸೇನವ್ವ ಸೆರಗ ತೆಗೆದು ಬಾಯಿಗೆ ಒತ್ತಿಕೊಂಡು ಮುಸುಮುಸು ಅಳತೊಡಗಿದಳು.

‘ಅಳಬ್ಯಾಡ ಹುಸೇನವ್ವ, ನಾವೆಲ್ಲ ಅದೀವಲ್ಲ, ಅದು ಏನ ಇರವಲ್ಲದ್ಯಾಕ ಸರಿ ಮಾಡೋಣು ಸುಮ್ನಿರು...’ ಸಮಾಧಾನಿಸಿದ ಗಂಗವ್ವ ‘ಇರು ಚಾ ಮಾಡಿ ತರ್ತೇನಿ’ ಎಂದು ಎದ್ದು ಅಡಿಗಿ ಕ್ವಾಣೆಗೆ ನಡೆದಳು.

ಚಾ ಕುಡಿಯುತ್ತಲೇ ಚೇತರಿಸಿಕೊಂಡ ಹುಸೇನವ್ವ ಕಣ್ಣೊರೆಸಿಕೊಂಡು ರಾತ್ರಿ ಮಗ ಶಫಿ ಮನೆಗೆ ಬಂದು ಮಾಡಿದ ರಾದ್ಧಾಂತನೆಲ್ಲ ಗಂಗವ್ವಗೆ ಬಿಡಿಸಿ ಹೇಳಿದಳು. ‘ಪೆಟಿಗಿ ಅಂಗಡಿ ಸಾಮಾನ್ನೆಲ್ಲ ಒದ್ದು ಕೆಡವಿ, ಕೈಗೆ ಸಿಕ್ಕಷ್ಟು ರೊಕ್ಕ, ಕೋಳಿ ಎಲ್ಲ ಎತ್ತಿಕೊಂಡು ತಡ್ಯಾಕೆ ಹ್ವಾದ ನನ ಮ್ಯಾಲ ಕೈ ಮಾಡಿ ಹೋಗ್ಯಾನ. ನಾಳಿ ಮತ್ತ ಬರ್ತೇನಿ, ಈ ಹೊಲ ಮನಿ ಎಲ್ಲ ನನ್ನೆಸರಿಗೆ ಬರೆಸಿಲ್ಲಾಂದ್ರೆ ನೋಡು ಅಂತ ಧಮಕಿ ಹಾಕ್ಯಾನ’ ಎಂದಳು.

‘ಅಲ್ಲ, ಏನಾಗೇತಿ ಅವ್ನಿಗೆ? ನೀ ಹ್ವಾದ ಮ್ಯಾಲ ಈ ಹೊಲ ಮನಿ ಎಲ್ಲ ಅವಂದೇ ತಾನೆ ? ಹೆತ್ತಾಕಿ ಮ್ಯಾಲ